ಎಂ.ವಿ.ಸಿ - 88/2025
ಪಿ.ಡಬ್ಲ್ಯು - 01

**ದಿನಾಂಕ : 05-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ದಿನ ನಾವು ರಾಷ್ಟ್ರೀಯ ಹೆದ್ದಾರಿಯಲ್ಲಿ ಬಾರ್ಕೂರಿನಿಂದ ಉಡುಪಿ ಕಡೆಗೆ ಬರುತಿದ್ದೆವು . ಆ ದಿನ ನನ್ನ ಜೊತೆ ನನ್ನ 14 ವರ್ಷದ ಮಗಳು ಕೂಡ ಇದ್ದಳು. ನನ್ನ ಪ್ರಕಾರ ಅಪಘಾತ ಡಿವೈಡರ್ ನ ಪಕ್ಕದಲ್ಲಿ ಯು ಟರ್ನ್ ತೆಗೆದುಕೊಳ್ಳುವಾಗ ಆಗಿರುತ್ತದೆ. ನಾನು ಹೇಳುವಂತ ಅಪಘಾತವಾದ ಸ್ಥಳದಲ್ಲಿ ಬ್ಯಾರಿಕೇಟ್ ಗಳನ್ನು ಹಾಕಿದ್ದಾರೆ ಎಂದರೆ ಸರಿ. ಉಡುಪಿಯಿಂದ ಬಾರ್ಕೂರಿಗೆ ಮತ್ತು ಬಾರ್ಕೂರಿನಿಂದ ಉಡುಪಿಗೆ ಬರುವ ಎರಡೂ ರಸ್ತೆಗಳಲ್ಲಿ ಬ್ಯಾರಿಕೇಟ್ ಗಳನ್ನು ದಾಟಿ ಬರಬೇಕು ಎಂದರೆ ಸರಿ. ನಾನು ಹೇಳುವಂತ ಅಪಘಾತವಾದ ಸ್ಥಳ ಬಾರಿ ವಾಹನಗಳು ಓಡಾಡುವಂತ ಮತ್ತು ವಾಹನಗಳು ಕೇಂದ್ರಿಕೃತವಾದ ಸ್ಥಳ ಎಂದರೆ ಸರಿ . ನಮ್ಮ ವಾಹನಗಳನ್ನು ಹೊರತುಪಡಿಸಿ ಬಹಳಷ್ಟು ವಾಹನಗಳು ಅಲ್ಲಿ ಇದ್ದವು . ನಮಗೆ ಅಪಘಾತಪಡಿಸಿದ ವಾಹನ ಉಡುಪಿ ಕಡೆಯಿಂದ ಬ್ರಹ್ಮಾವರದ ಕಡೆಗೆ ಬಂದು ಪುನಃ ಯುಟರ್ನ್ ತೆಗೆದುಕೊಂಡು ಉಡುಪಿ ಕಡೆಗೆ ಹೋಗಲು ಪ್ರಯತ್ನಿಸುತಿದ್ದಾಗ ಅಪಘಾತ ಆಗಿದೆ. ಅಪಘಾತದ ಮೊದಲು ಸದ್ರಿ ವಾಹನ ಯುಟರ್ನ್ ತೆಗೆದುಕೊಳ್ಳುವವುದನ್ನು ನಾನು ಗಮನಿಸಿರುತ್ತೇನೆ. ಸದ್ರಿ ವಾಹನವನ್ನು ನೋಡಿ ನನ್ನ ವಾಹನವನ್ನು ನಿಲ್ಲಿಸಲು ನಾನು ಪ್ರಯತ್ನಿಸಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿ ನಮ್ಮ ವಾಹನವನ್ನು ಜಾಗರುಕತೆಯಿಂದ ಚಲಾಯಿಸಿದೇ ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ

ಸರಿಯಲ್ಲ. 2 ನೇ ಎದುರುದಾರರ ವಿಮೆಗೆ ಒಳಪಟ್ಟ ವಾಹನದಿಂದ ಅಪಘಾತ ಉಂಟಾಗಿಲ್ಲ ಎಂದರೆ ಸರಿಯಲ್ಲ.

ನನಗೆ ಮೊದಲು ಮಹೇಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟು ತದನಂತರ ಟಿಎಂಎ ಪೈ ಆಸ್ಪತ್ರೆ ಉಡುಪಿಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ . ನಾನು ಮೇ 2023 ರ ನಂತರ ಟಿಎಂಎ ಪೈ ಆಸ್ಪತ್ರೆಗೆ ಹೋಗಿಲ್ಲ. ನನಗೆ ಆದ ಗಾಯಗಳು ಈಗ ಸಂಪೂರ್ಣ ಗುಣಮುಖವಾಗಿದೆ ಎಂದರೆ ಸರಿ. ನನಗೆ ಯಾವುದೇ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಅಂಗನ್ಯೂನತೆ ಪ್ರಮಾಣ ಪತ್ರ ಪಡೆದಿರುತ್ತೇನೆ. ನನಗೆ ಯಾವುದೇ ರೀತಿಯ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಭವಿಷ್ಯದ ವೈದ್ಯಕೀಯ ವೆಚ್ಚಕ್ಕಾಗಿ ಹಣ ಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು ರೂ 25000/- ಸಂಭಳ ಪಡೆಯುತಿದ್ದೆ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ. ನನಗೆ ಅಪಘಾತದಿಂದ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದ ಸಮಯದಲ್ಲಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು, ಪೌಷ್ಟಿಕ ಆಹಾರಕ್ಕೆ, ಓಡಾಟಕ್ಕೆ, ಪರಿಚಾರಕರಿಗೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.